# ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)



**ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ಸಹಯೋಗದಿಂದ ಜಾರಿಗೊಳಿಸಲಾಗಿರುತ್ತದೆ.**

ಮುಂಗಾರು 2023 ಸುರಕ್ಷಿತ ಕೃಷಿಕರು, ದೇಶದ ಹೆಮ್ಮೆ

**ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)** ಅಡಿ ನೋಂದಣಿ ಮಾಡಿಸಿರುವ ಕೃಷಿಕರಿಗೆ ಮಳೆ, ತಾಪಮಾನ, ಗಾಳಿ, ಆದ್ರತೆ ಮುಂತಾದ ಪ್ರತಿಕೂಲ ವಾತಾವರಣದಿಂದ ಉಂಟಾಗುವ ಸಂಭವನೀಯ ಬೆಳೆ ನಷ್ಟಗಳ ಕಾರಣದಿಂದಾಗುವ ಹಣಕಾಸಿನ ನಷ್ಟಗಳ ಸಂಭಾವ್ಯತೆಯ ಕಷ್ಟವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.



ಡಬ್ಲ್ಯೂಬಿಸಿಐಎಸ್ ಯೋಜನೆಯಡಿ ಬೆಲೆ ನಷ್ಟವನ್ನು ಅಂದಾಜಿಸಲು ಹವಾಮಾನ ಸೂಚ್ಯಂಕಗಳನ್ನು ಪ್ರಾಕ್ಸಿಯಾಗಿ ಉಪಯೋಗಿಸಲಾಗುತ್ತಾದೆ. ಹವಾಮಾನ ಸೂಚ್ಯಂಕಗಳನ್ನು ಬಳಸಿಕೊಂಡು ಸಂಭವನೀಯ ಬೆಳೆ ನಷ್ಟವನ್ನು ಅಂದಾಜಿಸಲು ಬೆಳೆವಾರು ಟರ್ಮ್‌ಶೀಟ್ಗಳನ್ನೂ ರಚಿಸಲಾಗಿರುತ್ತದೆ.

ಈ ರೀತಿಯಲ್ಲಿ ಈ ಯೋಜನೆಯು ಕೃಷಿಕರಿಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುತ್ತದೆ ಹಾಗು ಆವಿಷ್ಕಾರಿ ಹಾಗು ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅವರಿಗೆ ಪ್ರೋತ್ಸಾಹ ನೀಡುವ ಮೂಲಕ ಕೃಷಿಯಲ್ಲಿ ನಿರಂತರತೆಯನ್ನು ಖಚಿತಪಡಿಸುತ್ತದೆ.

**ಈ ಯೋಜನೆಯಿಂದ ಯಾರು ಪ್ರಯೋಜನ ಪಡೆಯಬಹುದು:**

ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರು ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ನಿಗದಿತ ಅರ್ಜಿಯೊಂದಿಗೆ ಪ್ರಸಕ್ತ ಸಾಲಿನ ಭೂಮಿ ಹೊಂದಿರುವುದರ ದಾಖಲೆಗಳಾದ ಪಹಣಿ ಪ್ರತಿ, ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಪ್ರತಿ, ಆಧಾರ್ ಕಾರ್ಡ್‌ನ ಪ್ರತಿ ಮತ್ತು ಸ್ವಯಂಘೋಷಿತ ಬೆಳೆ ವಿವರ ಸಲ್ಲಿಸುವುದು.



ಯೋಜನೆಯ ಮಾರ್ಗಸೂಚಿಯನ್ವಯ ಬ್ಯಾಂಕಿನಲ್ಲಿ ಸಾಲ ಮಂಜೂರಾದ ಎಲ್ಲಾ ರೈತರನ್ನು ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುತ್ತದೆ.

**ಹವಾಮಾನದ ಈ ಸೂಚ್ಯಂಕಗಳು ಒಳಗೊಂಡಿರುತ್ತವೆ:**


ಯೋಜನೆಯ ಅಡಿಯಲ್ಲಿ ಬೆಳೆಯ ನಷ್ಟಗಳಿಗೆ ಕಾರಣವಾಗುವ ಈ ಕೆಳಗಿನ ಹವಾಮಾನದ ಸೂಚ್ಯಂಕಗಳು ಒಳಗೊಂಡಿರುತ್ತವೆ:

- ಮಳೆಯ ಕೊರತೆ, ಅತಿವೃಷ್ಟಿ, ಒಣಹವೆ, ಬರಗಾಲ
- ಆದ್ರತೆ
- ತಾಪಮಾನಅಧಿಕ ತಾಪಮಾನ
- ಮೇಲಿನ ಎ ದಿಂದ ಡಿ ವರೆಗಿನ ಸೂಚ್ಯಂಕಗಳ ಸಂಯೋಜನೆಗಳು
- ಗಾಳಿಯ ವೇಗ

**ಯೋಜನೆಯ ಲಾಭ ಪಡೆಯಲು ರೈತರಿಂದ ಕಡ್ಡಾಯವಾಗಿ ಸಲ್ಲಿಸಬೇಕಾದ ದಸ್ತಾವೇಜುಗಳು :**



- ಆಧಾರ್ ಕಾರ್ಡ್‌ನ ಪ್ರತಿ
- ಸರಿಯಾಗಿ ತುಂಬಿಸಲಾದ ಪ್ರಸ್ತಾವ ಫಾರ್ಮ್‌ನ ಪ್ರತಿ
- ಇತ್ತೀಚೆಗಿನ ಜಮೀನಿನ ದಾಖಲೆ ( ಆರ್ ಟಿ ಸಿ ) / ಜಮೀನಿನ ಸ್ವಾಧೀನತೆಯ ದಾಖಲೆ



- ಪ್ರಮಾಣಪತ್ರ (ಎಲ್ ಪಿ ಸಿ ) / ಖಸಾರಾ ಇತ್ಯಾದಿಗಳ ಪ್ರತಿ
- ಅನ್ವಯವಾಗುವ ಒಪ್ಪಂದ / ಟೆನೆಂಟ್ ಕೃಷಿಕರ ಒಪ್ಪಂದಕ್ಕಾಗಿ ಅಫಿದಾವಿತ್
- ಐಎಫ್ ಎಸ್ ಸಿ ನಂಬರ್ ಮತ್ತು ಬ್ಯಾಂಕ್ ಖಾತೆ ನಂಬರ್ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ
- ಬೀಜಬಿತ್ತನೆಗಾಗಿ ಸ್ವಯಘೋಷಣೆ ಪತ್ರ

**ಕ್ಲೇಮ್ ಗಳ ಮೌಲ್ಯ ಮಾಪನ ಇತ್ಯರ್ಥ :**

ಸೂಚಿತ ರೆಫರೆನ್ಸ್ ವೆದರ್ ಸ್ಟೇಷನ್ ನಿಂದ ದಾಖಲಿಸಲಾದ ಹವಾಮಾನದ ಡೇಟಾದ ಆಧಾರದ ಮೇಲೆ ಮಾತ್ರ ಕ್ಲೇಮ್ ಗಳನ್ನು ಮೌಲ್ಯ ಮಾಪನ ಮಾಡಲಾಗುತ್ತದೆ ಹಾಗೂ ಪೂರ್ಣ ಪಾಲಿಸಿ ಅವಧಿಗಾಗಿ ಪ್ರಮಾಣೀಕೃತ ಹವಾಮಾನ ಡೇಟಾವನ್ನು ಸ್ವೀಕರಿಸಿದ ನಂತರ ಹಾಗೂ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಬ್ಸಿಡಿ ಸ್ವೀಕೃತಿಯ ನಂತರ ಕ್ಲೇಮ್ ಗಳ ಪ್ರಕ್ರಿಯೆಗಳು ಪ್ರಾರಂಭವಾಗುತ್ತದೆ.

| ಜಿಲ್ಲೆಯ ಹೆಸರು | ಬೆಳೆ ಹೆಸರು | ವಿಮಾ ಮೊತ್ತ (ರೂ/ಹೆ) | ಕೃಷಿಕರ ಪಾಲಿನ ಮೊತ್ತ (ರೂ / ಹೆ.) | ಕೃಷಿಕರ ಪಾಲು | ದಾಖಲುಗೊಳ್ಳವ ಕಟ್-ಆಫ್ ತಾರೀಖು |
|---|---|---|---|---|---|
| ದಾವಣಗೆರೆ | ಅಡಿಕೆ | 128000 | 5% | 6400 | 15 ಜುಲೈ, 2023 |
| ದಾವಣಗೆರೆ | ವೀಳ್ಯದೆಲೆ | 117000 | 5% | 5850 | 15 ಜುಲೈ, 2023 |
| ದಾವಣಗೆರೆ | ಮಾವು | 80000 | 5% | 4000 | 31ನೇ ಜುಲೈ, 2023 |
| ದಾವಣಗೆರೆ | ಕರಿಮೆಣಸು | 47000 | 5% | 2350 | 15 ಜುಲೈ, 2023 |
| ದಾವಣಗೆರೆ | ದಾಳಿಂಬೆ | 127000 | 5% | 6350 | 15 ಜುಲೈ, 2023 |

| ಜಿಲ್ಲೆ/ರಾಜ್ಯ | ಹುದ್ದೆ | ಮುಖ್ಯಸ್ಥರು | E-mail | ದೂರವಾಣಿ |
|---|---|---|---|---|
| ಕರ್ನಾಟಕ | ರಾಜ್ಯ ಪ್ರಮುಖರು | ಕಿರಣ್ ಕುಮಾರ್ ಗೊಲ್ಲ | kiran.golla@hfdcergo.com | 9885396744 |
| ಕರ್ನಾಟಕ | ಜಿಲ್ಲಾ ನಿರ್ವಾಹಕರು | ಬಸವರಾಜ ಹಿರೇಮಠ | basavaraj.hiremath1@hfcergo.com | 8976701462 |
| ಕರ್ನಾಟಕ | ಜಿಲ್ಲಾ ನಿರ್ವಾಹಕರು | ಶಶಿಕಿರಣ್ | shashikirans1995@gmail.com | 8431462824 |



ಕರ್ನಾಟಕದ ಕರಾವಳಿ ದಕ್ಷಿಣ ಕನ್ನಡ ಜಿಲ್ಲೆಯ ಅಡ್ಯನಡ್ಕ ಗ್ರಾಮದ ನವೀನ ಕೃಷಿಕ ಶ್ರೀ ಅಮೈ ಮಹಾಲಿಂಗ ನಾಯಕ್ (ವಯಸ್ಸು 77 ವರ್ಷ) ಅವರಿಗೆ ನವೀನ ಶೂನ್ಯ-ಶಕ್ತಿ ಸೂಕ್ಷ್ಮ ನೀರಾವರಿ ವ್ಯವಸ್ಥೆಯ ಮೂಲಕ ಶುಷ್ಕ ಇಳಿಜಾರಿನ ಗುಡ್ಡವನ್ನುಫಲವತ್ತಾದ ತೋಟವಾಗಿ ಪರಿವರ್ತಿಸಿದ್ದಕ್ಕಾಗಿ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ -2022 ರಲ್ಲಿ ನೀಡಿ ಗೌರವಿಸಲಾಗಿದೆ.

ಅವರ ಎಲ್ಲಾ ಪ್ರಯತ್ನಗಳಿಗಾಗಿ, ಅವರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅವರನ್ನುಒನ್-ಮ್ಯಾನ್ ಆರ್ಮಿ ಮತ್ತು ಟನೆಲ್ ಮ್ಯಾನ್ ಎಂದೂ ಕರೆಯಲಾಗುತ್ತದೆ. ಶ್ರೀ ನಾಯ್ಕರವರ ಕೃಷಿ ಜಮೀನು ಮಾದರಿ ಕೃಷಿ ಭೂಮಿಯಾಗಿದೆ, ಮತ್ತು ಪ್ರವಾಸಿಗರು ಸೇರಿದಂತೆ ವರ್ಷಕ್ಕೆ 1,000 ಕ್ಕೂ ಹೆಚ್ಚು ಸಂದರ್ಶಕರನ್ನು ಹೊಂದಿದೆ.

**ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು,**

**ದಯವಿಟ್ಟು ಕರೆ ಮಾಡಿ : ಶುಲ್ಕ ರಹಿತ ಸಂಖ್ಯೆ: 1800 266 0700**

ಸಾಲ-ಪಡೆಯದ ಕೃಷಿಕರು ಅತಿ ಹತ್ತಿರದ ವಿಮಾ ಸಂಸ್ಥೆಗಳು, ಅಂದರೆ, ರಾಷ್ಟ್ರೀಕೃತ ಬ್ಯಾಂಕ್, ಸಹಕಾರಿ ಬ್ಯಾಂಕ್, ಪ್ರಾಥಮಿಕ ಕೃಷಿಸಹಕಾರ ಸಂಸ್ಥೆ (ಪಿಎಸಿಎಸ್), ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್‌ಗಳು/ವಿಮಾ ಮಧ್ಯವರ್ತಿ/ ಸಾಮಾನ್ಯ ಸೇವಾ ಕೇಂದ್ರ (ಸಿಎಸ್‌ಸಿ)/ಗ್ರಾಮ ಒನ್ ಇದರ ಮೂಲಕ ಸ್ವತ: ದಾಖಲುಗೊಳ್ಳುವುದು ಇವುಗಳ ಮೂಲಕ ತಮ್ಮ ಬೆಳೆ ವಿಮೆ ಮಾಡಿಕೊಳ್ಳಬಹುದು.

ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್. ಐಆರ್‌ಡಿಎಐ ರಿಜಿ. ನಂ. 146. CIN: U66030MH2007PLC177117. ರಿಜಿಸ್ಟರ್ಡ್ ಮತ್ತು ಕಾರ್ಪೊರೇಟ್ ಕಛೇರಿ: 1ನೇ ಮಹಡಿ, ಎಚ್‌ಡಿಎಫ್‌ಸಿ ಹೌಸ್, 165-166 ಬ್ಯಾಕ್‌ಬೇ ರಿಕ್ಲಮೇಶನ್, ಎಚ್. ಟಿ. ಪಾರೆಖ್ ಮಾರ್ಗ, ಚರ್ಚ್‌ಗೇಟ್, ಮುಂಬಯಿ -400020. ಅಪಾಯದ ಅಂಶಗಳು, ನಿಯಮ ಮತ್ತು ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಾರಾಟವನ್ನು ಅಂತಿಮಗೊಳಿಸುವ ಮೊದಲು ದಯವಿಟ್ಟು ಮಾರಾಟ ಬ್ರೋಷರ್/ಪ್ರಾಸ್ಪೆಕ್ಟಸ್‌ನ್ನು ಓದಿರಿ. ಈ ಮೇಲೆ ತೋರಿಸಲಾದ ಟ್ರೇಡ್ ಲೋಗೊ ಎಚ್‌ಡಿಎಫ್‌ಸಿ ಲಿ. ಮತ್ತು ಎರ್ಗೋ ಇಂಟರ್‌ನ್ಯಾಶನಲ್ ಎಜಿಗೆ ಸೇರಿದೆ ಮತ್ತು ಲೈಸನ್ಸ್‌ನಡಿಯಲ್ಲಿ ಕಂಪೆನಿಯಿಂದ ಉಪಯೋಗಿಸಲ್ಪಡುತ್ತಿದೆ. ಯುಐಎನ್: ಸಿಎಸ್‌ಸಿ – ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ – HDE-AG-P18-26-V01-17-18 | ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ IRDAN125P0005V01201617. UID: 12865.